# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ: 21.05.2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು**

ದಿನಾಂಕ: 21.05.2022 ರಂದು ವಾರ್ಡ್ ಸಂಖ್ಯೆ 160ರ ಮೇ–2022 ಮಾಹೆಯ ಮೂರನೇ ಶನಿವಾರದ **ವಾರ್ಡ್** ಸಮಿತಿ ಸಭೆ ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

➢ ಐಡಿಯಲ್ ಹೋಮ್ಸ್ ಬಡಾವಣೆಯ ನಿವಾಸಿಯಾದ ಶ್ರೀಮತಿ ಸಾಧನಾರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದರು.

- ಕಳೆದ ಸಭೆಯಲ್ಲಿ ಸಲ್ಲಿಸಲಾಗಿದ್ದ ದೂರುಗಳನ್ನು ಪರಿಹರಿಸಿರುವುದಕ್ಕಾಗಿ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಹಾಗೂ ಬೆಸ್ಕಾಂ ವಿಭಾಗದ ಅಧಿಕಾರಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಕಳೆದ ಮೂರು ಸಭೆಗಳಲ್ಲೂ ಕೋರಿದ್ದರೂ ಕೂಡ ಇಲ್ಲಿಯವರೆಗೆ ರಸ್ತೆ ಗುಂಡಿ ಮುಚ್ಚಿರುವುದಿಲ್ಲವೆಂದು ದೂರು ನೀಡಲಾಗಿ ಉತ್ತರಿಸಿದ ನೋಡಲ್ ಅಧಿಕಾರಿಗಳು ರಸ್ತೆ ಗುಂಡಿ ಮುಚ್ಚಲು Fix My street App ಮೂಲಕ ವಾರ್ಡ್ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಗುರುತಿಸಲಾಗಿದ್ದು, ಮಳೆ ಪ್ರಮಾಣ ಕಡಿಮೆ ಆದ ನಂತರ ಕೇಂದ್ರ ಕಛೇರಿಯಿಂದ ಕಾರ್ಯಾದೇಶ ನೀಡಲಾಗಿರುವ ಗುತ್ತಿಗೆದಾರರ ಮೂಲಕ ರಸ್ತೆ ಗುಂಡಿ ಮುಚ್ಚಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.
- ಮಳೆಗಾಲವಾದ್ದರಿಂದ ಮನೆಯ ಮೇಲೆ ಬೀಳುವ ಸಂಭವವಿರುವ ಮರದ ರೆಂಬೆಗಳನ್ನು ತೆರವುಗೊಳಿಸಲು ಹಾಗೂ ಶಿಥಿಲಗೊಂಡಿರುವ ಮರದ ರೆಂಬೆಗಳನ್ನು ತೆರವುಗೊಳಿಸಲು ಕೋರಿದರು.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವವರಿಗೆ ದಂಡ ವಿಧಿಸುವಂತೆ ಮಾರ್ಷಲ್ ಗಳನ್ನು ಕೋರಲಾಯಿತು.
- ಎಲ್ಲೆಂದರಲ್ಲಿ ಕಸ ಸುರಿಯುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಸುತ್ತಮುತ್ತಲ ಶಾಲೆಗಳಿಗೆ ಭೇಟಿ ನೀಡಿ ಕಸ ಸಂಗ್ರಹಣೆ, ವಿಂಗಡಣೆ, ವಿಲೇವಾರಿ ಹಾಗೂ ಸ್ವಚ್ಛತೆ ಕಾಪಾಡುವುದರ ಬಗ್ಗೆ ಅರಿವು ಮೂಡಿಸಿದಲ್ಲಿ ಮುಂಬರುವ ಪೀಳಿಗೆಯು ಕಸ ವಿಲೇವಾರಿ ಸಮಸ್ಯೆಯಿಂದ ದೂರ ಉಳಿಯಬಹುದೆಂದು ಅಭಿಪ್ರಾಯ ಪಟ್ಟರು.
- ಕಾರ್ಪೊರೇಶನ್ ಬ್ಯಾಂಕ್ ರಸ್ತೆಯನ್ನು ಏಕಮುಖ ಸಂಚಾರ (One way) ರಸ್ತೆಯಾಗಿ ಮಾಡುವಂತೆ ಸಲಹೆ ನೀಡಿದರು.

- ಶ್ರೀ ಚಂದ್ರಶೇಖರ್ ರವರು ಈ ಕೆಳಕಂಡ ದೂರುಗಳನ್ನು ದೂರು/ಅಹವಾಲುಗಳನ್ನು ಸಲ್ಲಿಸಿದರು.
  - ತಮ್ಮ ಪ್ರದೇಶದಲ್ಲಿ ರಸ್ತೆ ಬದಿ ಚರಂಡಿಗಳ ಮೇಲೆ ಸ್ಲಾಬ್ ಮುಚ್ಚಿಸಿಕೊಡಲು ಕೋರಿದರು.
  - ತಮ್ಮ ಅಪಾರ್ಟ್ ಮೆಂಟ್ ನಲ್ಲಿ ಉತ್ಪತ್ತಿಯಾಗುವ ಕಸವನ್ನು Bulk Waste ಎಂದು ಪರಿಗಣಿಸಿರುವುದರಿಂದ ಕಸ ವಿಲೇವಾರಿ ಮಾಡಲು ತೊಂದರೆಯಾಗುತ್ತಿದ್ದು, ಪರಿಶೀಲಿಸಿ ಎಷ್ಟು ಪ್ರಮಾಣಕ್ಕಿಂತ ಹೆಚ್ಚು ಕಸ ಉತ್ಪತ್ತಿಯಾದಲ್ಲಿ Bulk Waste ಎಂದು ಪರಿಗಣಿಸಲಾಗುವುದೆಂದು ಕಿರಿಯ ಆರೋಗ್ಯ ಪರಿವೀಕ್ಷಕರಿಲ್ಲಿ ಸ್ಪಷ್ಟೀಕರಣ ಕೋರಿದರು. ಇದಕ್ಕೆ ಉತ್ತರಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು 50Kg ಗಿಂತ ಹೆಚ್ಚಿನ ಕಸ ಉತ್ಪತ್ತಿಯಾದಲ್ಲಿ Bulk Waste generator ಎಂದು ಪರಿಗಣಿಸಲಾಗುವುದೆಂದು ತಿಳಿಸಿದರು.
  - ಹೊಸದಾಗಿ ಕಟ್ಟಡ ನಿರ್ಮಿಸುತ್ತಿರುವ ಕಟ್ಟಡಗಳ ಮಾಲೀಕರು ರಸ್ತೆ ಬದಿ ಚರಂಡಿಯಲ್ಲಿ ಮಣ್ಣು ಹಾಗೂ ಕಟ್ಟಡದ ಸಾಮಗ್ರಿಗಳನ್ನು ಹಾಕಿರುವುದರಿಂದ ಮಳೆ ನೀರು ಚರಂಡಿಯಲ್ಲಿ ಹರಿಯದೇ ರಸ್ತೆಯಲ್ಲಿ ಹರಿದು ತೊಂದರೆಯಾಗುತ್ತಿದ್ದು ಸಂಬಂಧಪಟ್ಟ ಕಟ್ಟಡಗಳ ಮಾಲೀಕರ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಕೋರಿದರು.
  - ಕಟ್ಟಡಗಳಿಗೆ ವಿದ್ಯುತ್, ಒಳಚರಂಡಿ ಹಾಗೂ ನೀರಿನ ಸಂಪರ್ಕಕ್ಕಾಗಿ ರಸ್ತೆ ಅಗೆದ ನಂತರ ಸದರಿ ಕಟ್ಟಡಗಳ ಮಾಲೀಕರು ಮರುಪೂರಣಗೊಳಿಸದೇ (Restoration) ಇರುವುದರಿಂದ ದ್ವಿಚಕ್ರ ವಾಹನ ಸವಾರರು ಬೀಳುವ ಸಂಭವವಿದ್ದು ಅಗತ್ಯ ಕ್ರಮ ವಹಿಸುವಂತೆ ಕೋರಿದರು.
- ಪ್ರೆಸ್ಟೀಜ್ ಬಾಗಮನೆ ಟೆಂಪಲ್ ಬೆಲ್ ಅಪಾರ್ಟ್‌ಮೆಂಟ್ ನಿವಾಸಿಯಾದ ಶ್ರೀ ಸತೀಶ್ ಕಾರಂತ್ ರವರು ಈ ಕೆಳಕಂಡ ದೂರು/ಅಹವಾಲು ಸಲ್ಲಿಸಿದರು
- ಜವರೇಗೌಡ ನಗರ ಮುಖ್ಯ ರಸ್ತೆಯಲ್ಲಿ BWSSB ವತಿಯಿಂದ ರಸ್ತೆ ಅಗೆದ ನಂತರ ಸರಿಯಾದ ರೀತಿಯಲ್ಲಿ ಮರುಪೂರಣಗೊಳಿಸದೇ ಇರುವುದರಿಂದ ಮತ್ತೊಮ್ಮೆ ರಸ್ತೆ ಕುಸಿದಿದ್ದು ತುರ್ತಾಗಿ ಸರಿಪಡಿಸುವಂತೆ ಕೋರಿದರು.
- ಕಳೆದ ಸಭೆಯಲ್ಲಿ ಕೋರಲಾಗಿದ್ದ/ದಾಖಲಿಸಲಾಗಿದ್ದ ದೂರುಗಳನ್ನು ತುರ್ತಾಗಿ ಪರಿಹರಿಸುವಂತೆ ಮತ್ತೊಮ್ಮೆ ಕೋರಿದರು.
- Fix My Street App ಮೂಲಕ ದೂರುಗಳನ್ನು ದಾಖಲಿಸಲು ಸಾಧ್ಯವಾಗುತ್ತಿಲ್ಲವೆಂದು ದೂರು ನೀಡಲಾಗಿ ಉತ್ತರಿಸಿದ ನೋಡಲ್ ಅಧಿಕಾರಿಗಳು ಪ್ರಸ್ತುತ ಸಾರ್ವಜನಿಕರ ಬಳಕೆಗೆ ಅನುಮತಿಸಲಾಗಿರುವುದಿಲ್ಲ ಕೆಲವೊಂದು ಬದಲಾವಣೆಗಳನ್ನು ಮಾಡಿ App ಮರುಸಿದ್ಧಪಡಿಸಿದ ನಂತರ ಸಾರ್ವಜನಿಕರ ಬಳಕೆಗೆ ಅನುಮತಿಸಲಾಗುವುದೆಂದು ತಿಳಿಸಿದರು.
- ಪಂಚಶೀಲಾ ಬ್ಲಾಕ್ ಬಡಾವಣೆಯ ರಸ್ತೆಗಳಲ್ಲಿ BWSSB ವತಿಯಿಂದ ರಸ್ತೆ ಅಗೆದ ನಂತರ ಸರಿಯಾಗಿ ಮರುಪೂರಣಗೊಳಿಸಿರುವುದಿಲ್ಲವೆಂದು (Restoration) ಅಲ್ಲಿನ ನಿವಾಸಿಗಳು ದೂರು ನೀಡಿದರು. ಹಾಗೂ ಬಿಬಿಎಂಪಿ ವತಿಯಿಂದ ಡಾಂಬರೀಕರಣಗೊಳಿಸಿದ ನಂತರ BWSSB ವತಿಯಿಂದ ರಸ್ತೆ ಅಗೆಯುತ್ತಿದ್ದು, ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆಯೆಂದು ಸಾರ್ವಜನಿಕರು ದೂರು ನೀಡಿದರು.
- ಶ್ರೀ ನಾರಾಯಣ್, ಕಾರ್ಪೊರೇಷನ್ ಬ್ಯಾಂಕ್ ನಿವಾಸಿ ಇವರು ಈ ಕೆಳಕಂಡ ದೂರುಗಳನ್ನು ದೂರು/ಅಹವಾಲುಗಳನ್ನು ಸಲ್ಲಿಸಿದರು.

- ಕಾರ್ಪೊರೇಶನ್ ಬ್ಯಾಂಕ್ ರಸ್ತೆಯಲ್ಲಿ ಫುಟ್ ಪಾತ್ ಒತ್ತುವರಿ ಮಾಡಿಕೊಂಡು ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ದೂರು ನೀಡಿ ಫುಟ್ ಪಾತ್ ಒತ್ತುವರಿ ತೆರವುಗೊಳಿಸುವಂತೆ ಕೋರಿದರು.
- ರಸ್ತೆ ಬದಿ ಚರಂಡಿ ಹಾಗೂ ಫುಟ್ ಪಾತ್ ಬ್ಲಾಕ್ ಆಗಿರುವುದರಿಂದ ಮಳೆ ನೀರು ಚರಂಡಿಯಲ್ಲಿ ಹರಿಯದೇ ರಸ್ತೆ ಹಾಗೂ ಮನೆಗಳಿಗೆ ನುಗ್ಗಿ ತೊಂದರೆಯಾಗಿರುವುದಾಗಿ ದೂರು ವಾಣಿಜ್ಯ ಚಟುವಟಿಕೆ ನೀಡಿದರು.
- ವಸತಿ ಪ್ರದೇಶದಲ್ಲಿ ಹೋಟೆಲ್, ಬಾರ್ ಹಾಗೂ ಮುಂತಾದ ವಾಣಿಜ್ಯ ಚಟುವಟಿಕೆ ನಡೆಸುತ್ತಿದ್ದು ಸಂಬಂಧಪಟ್ಟ ಇಲಾಖೆಯು ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿದರು.
- ಒಣಕಸ ಸಂಗ್ರಹಣಾ ಘಟಕದಲ್ಲಿ ಸಂಗ್ರಹಿಸಲಾಗಿರುವ ಕಸವನ್ನು ತುರ್ತಾಗಿ ವಿಲೇವಾರಿಗೊಳಿಸಲು ಕೋರಿದರು.

➢ ಮುಂದಿನ ಸಭೆಗೆ ಪೊಲೀಸ್ ಇಲಾಖೆ, ಬೃಹತ್ ನೀರುಗಾಲುವೆ, ಅರಣ್ಯ ವಿಭಾಗ, ಹಾಗೂ ಟ್ರಾಫಿಕ್ ವಿಭಾಗದ ಅಧಿಕಾರಿಗಳನ್ನು ಮುಂದಿನ ಸಭೆಗೆ ತಪ್ಪದೇ ಆಹ್ವಾನಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಕೋರಿದರು.

➢ 1ನೇ A ಅಡ್ಡರಸ್ತೆ, ಐಡಿಯಲ್ ಹೋಮ್ಸ್ ಬಡಾವಣೆ, ಜೈನ್ ಕಾಲೇಜು ಹಿಂಭಾಗದ ಪ್ರದೇಶದ ನಿವಾಸಿಯಾದ ಶ್ರೀ ಸತ್ಯನಾರಾಯಣ್ ರವರು ಬೃಹತ್ ನೀರುಗಾಲುವೆಯ ತಡೆಗೋಡೆ ಕುಸಿದು ಬಿದ್ದಿರುವುದರಿಂದ ಇತ್ತೀಚೆಗೆ ಸುರಿದ ಭಾರೀ ಮಳೆಗೆ ಅಕ್ಕ ಪಕ್ಕದ ರಸ್ತೆಗಳು, ಮನೆಗಳು ಜಲಾವೃತಗೊಂಡಿದ್ದು ತುರ್ತಾಗಿ ತಡೆ ಗೋಡೆ ನಿರ್ಮಿಸಲು ಕ್ರಮ ವಹಿಸುವಂತೆ ಹಾಗೂ ಅಲ್ಲಿಯವರೆಗೆ ಮಳೆ ನೀರು ಸರಾಗವಾಗಿ ಹರಿಯಲು ಹೂಳೆತ್ತಲು ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳಲ್ಲಿ ಕೋರಲಾಗಿ ಉತ್ತರಿಸಿದ ನೋಡಲ್ ಅಧಿಕಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ತಡೆಗೋಡೆ ನಿರ್ಮಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

➢ ಮಳೆಹಾನಿ ಪ್ರದೇಶಗಳ ಸ್ಥಳ ಪರಿಶೀಲನೆ ನಡೆಸಲು ಸಾರ್ವಜನಿಕರು ಕೋರಿದರು.

➢ ಬಿಇಎಂಎಲ್ ಬಡಾವಣೆಯ 4ನೇ ಹಂತದ ರಸ್ತೆಗಳ ಅಭಿವೃದ್ಧಿಪಡಿಸಲು ಅಲ್ಲಿನ ಸಾರ್ವಜನಿಕರು ಕೋರಿದರು.

➢ ಬಾಟಾ ಶೋರೂಂ ಹಿಂಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಆ ಭಾಗದ ನಿವಾಸಿಗಳು ಕೋರಿದರು.

➢ ಐಡಿಯಲ್ ಹೋಮ್ಸ್ ಬಡಾವಣೆಯ 43ನೇ ಮುಖ್ಯರಸ್ತೆ (ಮೋನಿಶ್ ಕಾರ್ನರ್) ರಸ್ತೆಯಲ್ಲಿ ಬೀದಿ ದೀಪ ಸರಿಪಡಿಸಲು ಅಲ್ಲಿನ ಸಾರ್ವಜನಿಕರು ಕೋರಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-160

ಸಹಿ/-
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-160

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.